156	ಹರಪ್ಪನಹಳ್ಳಿ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಹರಪ್ಪನಹಳ್ಳಿ	ದಾವಣಗೆರೆ
157	ಚನ್ನಗಿರಿ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಚನ್ನಗಿರಿ	ದಾವಣಗೆರೆ
158	ಜಗಳೂರು ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಜಗಳೂರು	ದಾವಣಗೆರೆ
159	ಹೊನ್ನಾಳಿ ತಾಲ್ಲೂಕು ಮಟ್ಟದ, ಕಸಬುದಾರರ ವಿವಿದೋದ್ದೇಶಗಳ ಸಹಕಾರಿ ಸಂಘ ಹೊನ್ನಾಳಿ	ದಾವಣಗೆರೆ

500(1143) : ಶ್ರೀ ಯೋಗಿಶ್ವರ್ ಭಟ್. ಎನ್(ಮಂಗಳೂರು) ಮಾನ್ಯ ಕೈಗಾರಿಕೆ ಮತ್ತು ಮೂಲಸೌಲಭ್ರಯ ಅಭಿವೃದ್ಧಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮಂಗಳೂರು ವಿಮಾನ ನಿಲ್ದಾಣವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಅಭಿವೃದ್ಧಿಗೊಳಿಸಲು ಕೈಗೊಂಡ ಕ್ರಮಗಳೇನು?

ಆ) ಈ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಬರುವ ಕಾಮಗಾರಿಗಳು ಯಾವಾಗ ಆರಂಭವಾಯಿತು; ಅವು ಯಾವುವು ಮತ್ತು ಯಾವಾಗ ಪೂರ್ಣಗೊಳಿಸಲಾಗುವುದು?

ಇ) ಇವುಗಳಿಗೆ ಬಿಡುಗಡೆಯಾಗಬೇಕಾದ ರಾಜ್ಯ ಮತ್ತು ಕೇಂದ್ರದ ಹಣ ಎಷ್ಟು?

ಈ) ಬಿಡುಗಡೆ ಆಗಿದ್ದಲ್ಲಿ (ಯಾವಾಗ ಬಿಡುಗಡೆಯಾಗಿದೆ) ಎಷ್ಟು ಹಣ ಬಿಡುಗಡೆಯಾಗಿದೆ?

ಉ) ಬಿಡುಗಡೆಯಾಗದಿದ್ದಲ್ಲಿ ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಪಿ.ಜಿ.ಆರ್.ಸಿಂಧ್ಯ (ಕೈಗಾರಿಕೆ ಮತ್ತು ಮೂಲಸೌಲಭ್ರಯ ಅಭಿವೃದ್ಧಿ ಸಚಿವರು): ಅ) ಮಂಗಳೂರು ವಿಮಾನ ನಿಲ್ದಾಣದಲ್ಲಿ ಎರಡನೇ ' ರನ್ ವೆ ' ನಿರ್ಮಾಣ ಕಾರ್ಯವನ್ನು ಏರ್‌ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾ (AAI) (ಎಎಐ) ಸಂಸ್ಥೆಯವರು ಕೈಗೆತ್ತಿಕೊಂಡಿರುತ್ತಾರೆ. ಅಗತ್ಯವಿರುವ ಜಮೀನನ್ನು ಒದಗಿಸುವುದು ಕರ್ನಾಟಕ ಸರ್ಕಾರದ ಜವಾಬ್ದಾರಿಯಾಗಿದ್ದು, ಈ ಬಾಬ್ತು ಈಗಾಗಲೇ ರೂ. 11.00 ಕೋಟಿಗಳನ್ನು ಖರ್ಚು ಮಾಡಿದೆ. ಭೂಮಿ ಸಮತಟ್ಟು ಮಾಡುವಿಕೆ ಇತ್ಯಾದಿ ಕಾಮಗಾರಿಗಳು ನಡೆಯುತ್ತಿವೆ. ಇದನ್ನು ಹೊರತುಪಡಿಸಿ, AAI ಸಂಸ್ಥೆಯವರು ಹೊಸ ಟರ್ಮಿನಲ್ ಹಾಗೂ ಇತರೆ ಸೌಲಭ್ಯಗಳನ್ನು ನಿರ್ಮಿಸಲು ಕೇಳಿರುವ 158 ಎಕರೆ ಹೆಚ್ಚುವರಿ ಜಮೀನನ್ನು ಭೂಸ್ವಾಧೀನ ಪಡಿಸಿಕೊಂಡು ಒದಗಿಸಲು ಕರ್ನಾಟಕ ಸರ್ಕಾರ ತೀರ್ಮಾನಿಸಿದೆ. ಇದಕ್ಕೆ ಸುಮಾರು ರೂ. 10.50 ಕೋಟಿ ಖರ್ಚಾಗುವುದು. ಕೇಂದ್ರ ಸರ್ಕಾರವು ಈ ಕಾಮಗಾರಿಗಾಗಿ ಅಗತ್ಯವಿರುವ ಹಣವನ್ನು ನೇರವಾಗಿ ಸ್ಥಳೀಯ AAI ಅಧಿಕಾರಿಗಳಿಗೆ ಒದಗಣೆ ಮಾಡುತ್ತಿದೆ.

501(1144) : ಶ್ರೀ ಯೋಗೀಶ್ ಭಟ್. ಎನ್ (ಮಂಗಳೂರು) ಮಾನ್ಯ ಮಾನ್ಯ ಬೃಹತ್,ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?